Ref.No.11-2024

WW-1,

Ref.No.11-2024

WW-1,

Ref.No.11-2024

WW-1,

Ref.No.11-2024

WW-1,

Ref.No.11-2024

WW-1,

**ದಿನಾಂಕಃ 09.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ.SSV ವಕೀಲರಿಂದ**

ನಾನು 2 ನೇ ಪಾರ್ಟಿ ಸಂಸ್ಥೆಯವರ ನಿಯಮ ಮತ್ತು ನಿಬಂಧನೆಗಳನ್ನು ತಿಳಿದುಕೊಂಡಿದ್ದೇನೆ. ಸಂಸ್ಥೆಯ ಹಿತಾಸಕ್ತಿಗೆ ವಿರುದ್ದವಾಗಿ ಯಾವುದೇ ಕೆಲಸ ಕಾರ್ಯಗಳನ್ನು ಮಾಡಬಾರದೆಂಬ ವಿಷಯ ನನಗೆ ಗೊತ್ತಿದೆ. ಅದೇ ರೀತಿಯಲ್ಲಿ ಗೈರು ಹಾಜರಾಗಬೇಕಾದರೆ ಸಂಸ್ಥೆಯ ಪೂರ್ವಾನುಮತಿಯನ್ನು ಪಡೆದುಕೊಳ್ಳಬೇಕೆಂಬ ವಿಚಾರ ನನಗೆ ಗೊತ್ತಿದೆ. ನಾನು ದಿಃ07.04.2021 ರಂದು 17.06.2021 ರವರೆಗೆ ಒಟ್ಟು 72 ದಿನಗಳ ಕಾಲ ಅನಧಿಕೃತ ಗೈರು ಹಾಜರಾಗಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ (ರಿ) ಇದಕ್ಕೆ ಕಾನೂನು ಬಾಹಿರವಾಗಿ ಮುಷ್ಕರಕ್ಕೆ ಬೆಂಬಲ ಕೊಟ್ಟಿದ್ದೆ ಎಂದರೆ ಸುಳ್ಳು. ನಾನು ಅನಧಿಕೃತವಾಗಿ ಗೈರು ಹಾಜರಾದ್ದರಿಂದ ದಿನವೊಂದಕ್ಕೆ ಸಾರಿಗೆ ಆದಾಯ ರೂ.10,754/-ರಂತೆ ಒಟ್ಟು 72 ದಿನಕ್ಕೆ ರೂ.7,74,228/- ನಷ್ಟವಾಗಲು ಕಾರಣನಾಗಿದ್ದೇನೆ ಎಂದರೆ ಸರಿಯಲ್ಲ.

2 ನೇ ಪಾರ್ಟಿ ಸಂಸ್ಥೆಯನ್ನು ಕರ್ನಾಟಕ ಅಗತ್ಯ ಸೇವಾ ನಿರ್ವಹಣೆ ಕಾನೂನು ಪ್ರಕಾರ ಸರ್ಕಾರವು ಅಗತ್ಯ ಸೇವೆ ಎಂದು ಪರಿಗಣಿಸಿದೆ ಎಂದರೆ ನಿಜ. ಕಾನೂನು ಬಾಹಿರವಾಗಿ ಮುಷ್ಕರಕ್ಕೆ ಬೆಂಬಲ ನೀಡಿ ಸಂಸ್ಥೆಗೆ ನಷ್ಟವಾಗಲು ಮತ್ತು ಕೆಟ್ಟ ಹೆಸರು ಬರಲು ಕಾರಣನಾಗಿದ್ದೇನೆ ಎಂದರೆ ಸರಿಯಲ್ಲ. ಸಂಧಾನ ಪ್ರಕ್ರಿಯೆ ಬಾಕಿ ಇರುವಾಗ ಯಾವುದೇ ನೌಕರನು ಮುಷ್ಕರ ಹೂಡಬಾರದು ಎಂಬ ನಿಯಮವಿದೆ ಎಂದರೆ ನಿಜ. ಸಾಕ್ಷಿಯು ನನ್ನ ತಂದೆಗೆ ಅನಾರೋಗ್ಯವಿದೆ ಎಂದು ತಿಳಿಸಿಯೇ ಹೋಗಿದ್ದೆ ಎಂದು ನುಡಿಯುತ್ತಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ (ರಿ) ಮುಷ್ಕರವನ್ನು ತಕ್ಷಣ ನಿಲ್ಲಿಸಿ ಕರ್ತವ್ಯಕ್ಕೆ ಹಾಜರಾಗಬೇಕೆಂದು ಮತ್ತು ಇದನ್ನು ನಿಷೇಧಿಸಲಾಗಿದೆ ಎಂದು ತಿಳಿಸಿದ್ದರೂ ಕೂಡ, ದಿಃ 07.04.2021 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿ ಮುಷ್ಕರದಲ್ಲಿ ನಿರತನಾಗಿದ್ದೆ ಎಂದರೆ ಸುಳ್ಳು. ನನ್ನ ತಂದೆಗೆ ಹುಷಾರಿಲ್ಲ ಎಂಬ ಕಾರಣಕ್ಕೆ ಗೈರು ಹಾಜರಾಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Ref.No.11-2024

WW-1,

ನಾನು ಸರ್ಕಾರದ ಮತ್ತು ಸಂಸ್ಥೆಯ ನಿಯಮಗಳನ್ನು ಉಲ್ಲಂಘಿಸಿ ಕಾನೂನು ಬಾಹಿರ ಮುಷ್ಕರಕ್ಕೆ ಬಾಗಿಯಾಗಿ ಕರ್ತವ್ಯ ಲೋಪ ಎಸಗಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಸ್ಥೆಯ ಶಿಸ್ತು ಮತ್ತು ನಡತೆ ನಿಯಮಾವಳಿಗಳನ್ನು ಉಲ್ಲಂಘಿಸಿದ್ದೇನೆ ಆದ್ದರಿಂದ ಯಾವುದೇ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡಾಲ್ಫ್ ಪೆರೇರಾ),
ಅಧ್ಯಕ್ಷಾಧಿಕಾರಿಗಳು,
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.